ESI.A.No.5/2020

AW-1,

ದಿನಾಂಕಃ 09-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. SWK ವಕೀಲರಿಂದ

ಅರ್ಜಿದಾರ ಸಂಸ್ಥೆಯು ಕ್ಯಾಂಟೀನ್ ವ್ಯವಹಾರವನ್ನು ಮಾಡುತ್ತದೆ. 2015 ರಿಂದ ಅದು ಕ್ಯಾಂಟೀನ್ ವ್ಯವಹಾರವನ್ನು ನಡೆಸುತ್ತಿದೆ. ಟೆಂಡರಿಗೋಸ್ಕರ ಇ ಎಸ್ ಐ ಕೋಡನ್ನು ನಾನೇ ಸ್ವತಃ ಅರ್ಜಿ ಕೊಟ್ಟು ಪಡೆದುಕೊಂಡಿದ್ದೆ. ಇ ಎಸ್ ಐ ಕೋಡ್ ಪಡೆಯಬೇಕಾದರೆ 10 ಜನರಿಗಿಂತ ಹೆಚ್ಚು ಕೆಲಸಗಾರರು ಇದ್ದಾರೆ ಎಂದು ನಾನು ತೋರಿಸಿದ್ದೆ ಎಂದರೆ ನಿಜ. 20 ಜನ ಇದ್ದಾರೆ ಎಂದು ತೋರಿಸಿ ನಾನು ಇ ಎಸ್ ಐ ಕೋಡ್ ಪಡೆದುಕೊಂಡಿದ್ದೆ ಎಂದರೆ ನಿಜ. ಕೋಡ್ ನಂಬರ್ ಪಡೆದ ನಂತರ ಏಪ್ರಿಲ್ 2017 ರಿಂದ ಮೇ 2019 ರವರೆಗೆ ವಂತಿಗೆಯನ್ನು ಪಾವತಿ ಮಾಡಿರಲಿಲ್ಲ ಎಂಬುದು ನಿಜ. ಆರೀತಿ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು ಇ ಎಸ್ ಐ ಕಾರ್ಪೊರೇಶನ್ನಿನವರು ದಿನಾಂಕಃ3-7-2019 ರಂದು ಸಿ-18 ನೋಟೀಸನ್ನು ನೀಡಿದರು ಎಂದರೆ ನಿಜ. ಆ ನೋಟೀಸಿನಲ್ಲಿ 1-8-2019 ರಂದು ಖುದ್ದು ಸುನಾವಣೆಗೆ ಹಾಜರಾಗಬೇಕೆಂದು ತಿಳಿಸಿದ್ದರು ಎಂದರೆ ನಿಜ. ನಾನು ಹೋಗಿದ್ದೆ. ಆವತ್ತು ಹೋಗಿಲ್ಲ ಎಂದು 22-8-2019 ರಂದು ಇನ್ನೊಂದು ದಿನಾಂಕವನ್ನು ನಿಗಧಿಪಡಿಸಿದರು ಎಂದರೆ ನಾನು ಹೋಗಿದ್ದೆ. ಈ ಎರಡೂ ಸಂಧರ್ಭಗಳಲ್ಲಿ ನಾನು ಹಾಜರಾಗದೇ ಇರುವುದರಿಂದ ದಿನಾಂಕಃ22-8-2019 ರಂದು ನಾನು ಹಾಜರಾಗಿ ನನ್ನ ಬಳಿ ಯಾವುದೇ ಕೆಲಸಗಾರರು ಇಲ್ಲ ಎಂದು ಹೇಳಿ ಬ್ಯಾಂಕ್ ಸ್ಟೇಟ್ಮೆಂಟನ್ನು ಮಾತ್ರ ಹಾಜರುಮಾಡಿದೆ ಎಂದರೆ ನಿಜ. ದಿಃ3-10-2019 ರಂದು ಮಿಕ್ಕಿದ ದಾಖಲಾತಿಗಳನ್ನು ಹಾಜರುಪಡಿಸುವಂತೆ ಇನ್ನೊಂದು ಕಾಲಾವಕಾಶವನ್ನು ಕೊಟ್ಟರು ಎಂದರೆ ನಿಜ. ಆ ದಿನ ಆಡಿಟರ್ ಜೊತೆ ಹಾಜರಾಗಿ ಬ್ಯಾಂಕ್ ಸ್ಟೇಟ್ಮೆಂಟ್ , ಐ ಟಿ ರಿಟರ್ನ ಮತ್ತು ಪ್ರಾಫಿಟ್ ಅಂಡ್ ಲಾಸ್ ಅಕೌಂಟ್ ಹಾಜರುಮಾಡಿದೆ ಎಂದರೆ ನಿಜ. ಆ ಸ್ಟೇಟ್ಮೆಂಟಿನಲ್ಲಿ 2017-18 ರಲ್ಲಿ ರೂ.6,34,856-00 ಗಳು ವ್ಯವಹಾರ ಆಗಿದೆ ಎಂದು ಹೇಳಿದ್ದೇನೆ ಎಂದರೆ ನಿಜ. 2018-19 ರಲ್ಲಿ ರೂ.9,32,540-00 ಗಳು ವ್ಯವಹಾರ ಆಗಿದೆ ಎಂದು ಹೇಳಿದೆ ಎಂದರೆ ನಿಜ. ಪ್ರಾಫಿಟ್ ಅಂಡ್ ಲಾಸ್ ಅಕೌಂಟಿನಲ್ಲಿ ಸಂಬಳ ಕೊಟ್ಟಿದ್ದನ್ನೂ ಕೂಡ ತೋರಿಸಿದ್ದೇನೆ ಎಂದರೆ ನಿಜ. ಸದರಿ ಪ್ರಾಫಿಟ್ ಅಂಡ್ ಲಾಸ್ ಅಕೌಂಟನ್ನು ಇಲ್ಲಿ ಹಾಜರು ಮಾಡಿಲ್ಲ ಎಂದರೆ ನಿಜ. ನಾನು ಬಿಲ್ಸ್ ವೋಚರ್ಸ ಮತ್ತು ಮೆಟೀರಿಯಲ್ ಕಾಸ್ಟ್ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದು ಕಲಂ 45 ಎ ರಡಿಯಲ್ಲಿ ಆದೇಶವನ್ನು ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದಲ್ಲಿ ರೂ.83,107-00 ಗಳನ್ನು ಕಟ್ಟಬೇಕೆಂದು ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಕ್ಯಾಂಟೀನನ್ನು ಕೇಂದ್ರ ಸರ್ಕಾರದ ಸಂಸ್ಥೆಯಲ್ಲಿ ನಡೆಸುತ್ತಿದ್ದೆ ಎಂದರೆ ನಿಜ. ಕೇಂದ್ರ ಸರ್ಕಾರದ ಸಂಸ್ಥೆಯಲ್ಲಿ ಕ್ಯಾಂಟೀನ್ ನಡೆಸಬೇಕಾದರೆ ಅವರದ್ದೇ ಕೆಲವು ನಿಯಮಾವಳಿಗಳು ಇವೆ ಎಂದರೆ

ESI.A.No.5/2020
AW-1,

ನಿಜ. ಆ ಟೆಂಡರ್ ನಲ್ಲಿ ಕನಿಷ್ಟ 20 ಜನ ಕೆಲಸಗಾರರು ಇದ್ದರೆ ಮಾತ್ರ ಟೆಂಡರ್ ನೀಡಲಾಗುವುದು ಎಂದು ತಿಳಿಸಲಾಗಿತ್ತು ಎಂದರೆ ಸರಿಯಲ್ಲ. ಟೆಂಡರ್ ಪತ್ರವನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಾನು ಇ ಎಸ್ ಐ ಕೋಡಿನ ಜೊತೆ ಪಿ ಎಫ್ ಕೋಡನ್ನು ಪಡೆದುಕೊಂಡಿದ್ದೇನೆ ಎಂದರೆ ನಿಜ. ಆ ಪಿ ಎಫ್ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ನಾನೇನು ಪಿ ಎಫ್ ಕಟ್ಟಿಲ್ಲ ಎಂದು ನುಡಿಯುತ್ತಾರೆ. ಕೇಂದ್ರ ಸರಕಾರದ ಸಂಸ್ಥೆಯಲ್ಲಿ ಪ್ರತಿ ವರ್ಷ ಪ್ರಾಫಿಟ್ ಅಂಡ್ ಲಾಸ್ ಅಕೌಂಟ್ ಮತ್ತು ವೇಜ್ ರಿಜಿಸ್ಟರನ್ನು ನೀಡಬೇಕಾಗಿತ್ತು ಎಂದರೆ ಆ ತರಹ ನಿಯಮ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ದುರುದ್ದೇಶದಿಂದ ಆ ತರಹ ಟೆಂಡರ್ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನಾವು ತೋರಿಸಿರುವ 22 ಜನ ಕಾರ್ಮಿಕರ ಆಧಾರದಲ್ಲಿ ಆದೇಶವನ್ನು ಮಾಡಿದ್ದಾರೆ ಅಷ್ಟು ಜನರು ಇರಲೇ ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.